# ನವಿಲುಗನ್ನಡಿ

- ಮೇ ಸಂಚಿಕೆ ಒಂದಕ್ಕಿಂತ ಒಂದು ಸೊಗಸಾದ ಕಥೆಗಳ ಹೂರಣವನ್ನೆ ಉಣಬಡಿಸಿತು. ‘ಅಲ್ಲಿದೆ ನಮ್ಮ ಮನೆ: ಮಧುರ ಭಕ್ತಿ ಮತ್ತು ಮುಸ್ಲಿಮ್ ಕವಿಗಳು’ (ಸಿ.ಎನ್. ರಾಮಚಂದ್ರನ್) ಭಗವಂತನೊಂದಿಗಿನ ಅನುಸಂಧಾನದ ಮೇಲೆ ಬೆಳಕು ಚೆಲ್ಲುವಂತಿದೆ. ನನ್ನ ಓದು–‘ಒದ್ದೆಗಣ್ಣಿನ ದೀಪ’ ಒಂದೇ ಉಸಿರಿಗೆ ಓದಿಸಿಕೊಂಡಿತು. ಇಡಿ ಮಯೂರವೆ ಮೈಮನಗಳಲ್ಲಿ ತುಂಬಿದಂತೆನಿಸಿತು.

  **ಮಾರುತಿ ಗೋಪಿಕುಂಟೆ, ಬೆಂಗಳೂರು**

- ‘...ಮಧುರ ಭಕ್ತಿ ಮತ್ತು ಮುಸ್ಲಿಮ್ ಕವಿಗಳು’ (ಸಿ.ಎನ್. ರಾಮಚಂದ್ರನ್) ಮಹಾನ್ ಸೂಫಿ ಸಂತರು, ಪ್ರೇಮ ಅರುಹುವ ಪರಿಗೆ ಮನಸೋತೆ.

  **ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ, ಹೊಸಪೇಟೆ**

- ನೆಲ್ಲುಕುಂಟೆ ವೆಂಕಟೇಶ್ ಅವರ ‘ಮಾವಿನ ಸಖ್ಯದ ಆಖ್ಯಾನ; ಕಟು ಮಧುರ ವ್ಯಾಖ್ಯಾನ’ ಲೇಖನ ಮಾವಿನ ರಸದೂಟವನ್ನೇ ಬಡಿಸಿದಂತಿತ್ತು. ಲೇಖನ ಹಣ್ಣುಗಳ ರಾಜ ಮಾವಿನ ಕುಲದ ಜನ್ಮ ವೃತ್ತಾಂತವನ್ನು ತಲಸ್ಪರ್ಶಿಯಾಗಿ ಹೇಳುತ್ತದೆ. ಮಾವಿನ ಹಣ್ಣಿನ ನಿರೂಪಣೆ ಮರದಲ್ಲೇ ಮಾಗಿದ ಮಾವಿನಷ್ಟೇ ರುಚಿಕರವಾಗಿದೆ.

  **ಎಂ.ಜಿ. ರಂಗಸ್ವಾಮಿ ಹಿರಿಯೂರು,**
  **ಬಿ.ಆರ್. ಅಣ್ಣಸಾಗರ, ಸೇಡಂ,**
  **ಸಂತೆಬೆನ್ನೂರು ಮಂಜಪ್ಪ, ಭದ್ರಾವತಿ**

- ಡಾ. ನಾ. ಮೊಗಸಾಲೆ ಅವರ ಮಾತು ‘ಕಥೆ’ ಎಷ್ಟು ಮುಖ್ಯವೋ ಹೇಳುವುದೂ ಅಷ್ಟೇ ಮುಖ್ಯ (ಸಂದರ್ಶನ: ಚಿದಾನಂದ ಸಾಲಿ) ಮಾರ್ಮಿಕವಾಗಿತ್ತು. ಒಬ್ಬ ಬರಹಗಾರನಿಗೆ ಇರಬೇಕಾದ ಸಂಯಮ, ಆತ್ಮ ಶೋಧನೆ, ತುಡಿತಗಳಿಗೆ ತನ್ನನ್ನು ಒಗ್ಗಿಸಿಕೊಳ್ಳಬೇಕಾದ ಬಗೆಯನ್ನು ಮೊಗಸಾಲೆಯವರು ತಮ್ಮ ಸಾತ್ವಿಕ ನುಡಿಗಳಿಂದಲೇ ಹೇಳುತ್ತಾ ಗಮನ ಸೆಳೆದಿದ್ದಾರೆ.

  **ಮಧುಕುಮಾರ ಸಿ.ಎಚ್. ಮಂಡ್ಯ,**
  **ಕನಕಪ್ಪ ವಾಗನಗೇರಿ**




- ರಾಜಕುಮಾರ ಕುಲಕರ್ಣಿ ಅವರ ‘ಘ್ರಾಣ’ ಕಥೆ ಅರ್ಥವತ್ತಾದ ಕಥಾವಸ್ತು, ವಿಷಯ ಮತ್ತು ನಿರೂಪಣೆಯಿಂದ ಗಮನ ಸೆಳೆಯುತ್ತದೆ. ಮನಸ್ಸಿನ ಹಲವು ಕಾಮನೆಗಳು ವಾಸನೆಯ ರೂಪದಲ್ಲಿ ಕಥಾ ನಾಯಕನ ಅನುಭವಕ್ಕೆ ಬರುವುದು ವಿನೂತನ ಪರಿಕಲ್ಪನೆ.

  **ಬಿ. ಜಿ. ಕುಲಕರ್ಣಿ, ಚಿಕ್ಕೋಡಿ.**
  **ಮಲ್ಲಿಕಾರ್ಜುನ ಸುರಧೇನುಪುರ**

- ಈ ಸಂಚಿಕೆಯ ಕಾವ್ಯಲೋಕ ಮನಸೂರೆಗೊಂಡಿತು. ವೀಣಾ ತಿರಕಪಡಿ ಅವರು ತಮ್ಮ ‘ರೊಟ್ಟಿ ಆಗುವುದೆಂದರೆ...’ ಕವಿತೆಯಲ್ಲಿ ಅಮ್ಮನ ಜೀವನದೊಂದಿಗೆ ತಳಕು ಹಾಕಿಕೊಂಡಿರುವ ರೊಟ್ಟಿಯನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ರಾಧೇಶ ತೋಳ್ಪಾಡಿ, ಚಂದ್ರಿಕಾ ಹೆಗಡೆ ಅವರ ಕವಿತೆಗಳು ಮಕ್ಕಳ ಕನಸಿನ ಲೋಕವನ್ನು ತೆರೆದು ತೋರುವಂತೆನಿಸಿದವು. ವಸಂತಕುಮಾರ್ ಪೆರ್ಲ, ನಿರ್ಮಲಾ ಶೆಟ್ಟರ್, ಅಕ್ಷತಾ ಕೃಷ್ಣಮೂರ್ತಿ, ಬಾಲಸುಬ್ರಹ್ಮಣ್ಯ ಕಂಜರ್ಪಣೆ ಅವರ ಕವನ ಕಟ್ಟುವ ಹದಗಾರಿಕೆ ಮುದ ನೀಡಿತು.

  **ಪಿ.ಶ್ರೀಧರ, ಲಕಮನಹಳ್ಳಿ**